ಮೂಲ ದಾವಾ ಸಂಖ್ಯೆ. 127/2018 ಡಿ ಡಬ್ಲ್ಯೂ 3

(ದಿನಾಂಕ 19-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ವಾದಿ ಪರ ಶ್ರೀಮತಿ ಎಸ್ ಹೆಚ್ ವಿ ವಕೀಲರಿಂದಃ-

ನನಗೆ ವಾದಿಯರು ಪ್ರತಿವಾದಿಯರು ಗೊತ್ತು. ಮರಿಗೋಣೆಪ್ಪ ಮತ್ತು ಹಾವಪ್ಪ ಇವರನ್ನು ನಾನು ನೋಡಿದ್ದೇನೆ. ವಾದಿಯರು ಈ ದಾವೆಯನ್ನು ಜಮೀನಲ್ಲಿ ಭಾಗಕ್ಕಾಗಿ ದಾಖಲಿಸಿದ್ದಾರೆ. ದಾವಾ ಜಮೀನುಗಳ ಸರ್ವೆ ನಂ ಮತ್ತು ಕ್ಷೇತ್ರ ನನಗೆ ಗೊತ್ತಿಲ್ಲ. ದಾವಾ ಜಮೀನುಗಳು ಹಾವಪ್ಪ ಮತ್ತು ಮರಿಗೋಣೆಪ್ಪ ಇವರ ಹಿರಿಯರ ಆಸ್ತಿಗಳಾಗಿರುತ್ತವೆ. ಹಾವಪ್ಪ ಮತ್ತು ಗೋಣೆಪ್ಪ ಇವರ ನಡುವೆ ವಿಭಾಗ ಆಗಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರ ವನ್ನು ನಾನೇ ಹೇಳಿ ಬರೆಸಿರುತ್ತೇನೆ. ಭಾಗ ಆಗಿದೆ ಅಂತಲೂ ಸಹ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿದ್ದೇನೆ. ಮೌಖಿಕವಾಗಿ ಎಷ್ಟು ವರ್ಷದ ಹಿಂದೆ ವಿಭಾಗವಾಯಿತು ಎಂದು ನನಗೆ ಗೊತ್ತಿಲ್ಲ. ಹಾವಪ್ಪ ಮತ್ತು ಗೋಣೆಪ್ಪ ಇವರಿಗೆ ಯಾವ ಯಾವ ಸರ್ವೆ ನಂ. ಗಳು ಮತ್ತು ಎಷ್ಟು ವಿಸ್ತೀರ್ಣ ವಿಭಾಗದಲ್ಲಿ ಬಂದಿರುತ್ತದೆ ಎಂದರೆ ಸಾಕ್ಷಿಯು ಸರ್ವೆ ನಂ.ಗಳು ನನಗೆ ಗೊತ್ತಿಲ್ಲ ವಿಸ್ತೀರ್ಣ ಹೇಳಬಹುದು ಎನ್ನುತ್ತಾರೆ. ಪ್ರತಿವಾದಿಯರು 14 ಎಕರೆ ಜಮೀನನ್ನು ಸಾಗು ಮಾಡುತ್ತಾರೆ ಮತ್ತು ವಾದಿಯರು ಸುಮಾರು 6-7 ಎಕರೆ ಜಮೀನನ್ನು ಸಾಗು ಮಾಡುತ್ತಾರೆ. ಅವುಗಳ ಸರ್ವೆ ನಂ ನನಗೆ ಗೊತ್ತಿಲ್ಲ. ಹಾವಪ್ಪ ಮತ್ತು ಗೋಣೆಪ್ಪ ಇವರ ನಡುವೆ ಯಾವುದೇ ವಿಭಾಗ ಆಗಿಲ್ಲ ಗೋಣೆಪ್ಪ ಇವನ ವಾರಸುದಾರರು ಯಾವುದೇ ಜಮೀನನ್ನು ಸಾಗು ಮಾಡುತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ 1 ಆಸ್ತಿಯನು ಹಾವಪ್ಪ ಇವರು ಮರಿಗೋಣೆಪ್ಪ ಇವರಿಗೆ ಮಾರಾಟ ಮಾಡಿರುತ್ತಾರೆ ಅಂತಾ ಹೇಳಲಾದ ಸಮಯದಲ್ಲಿ ಮತ್ತು ಖರೀದಿ ಪತ್ರ ಆಗಿದೆ ಅಂತಾ ಹೇಳಲಾದ ಸಮಯದಲ್ಲಿ ನಾನು ಹಾಜರಿರಲಿಲ್ಲ ಈ ವಿಚಾರ ನನಗೆ ಗೊತ್ತಿಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ವಾದಿಯರ ತಂದೆ ದಾವಾ 1ನೇ ಆಸ್ತಿಯನ್ನು ಪ್ರತಿವಾದಿಯರ ತಂದೆಗೆ ಮಾರಾಟ ಮಾಡಿ ನೊಂದಣಿ ದಾಖಲೆ ಮಾಡಿಕೊಟ್ಟಿದಾರೆ ಅಂತಾ ಸುಳ್ಳು ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳಾದ ನಿಂಗಪ್ಪ ಹಾಗೂ ನಾಗಪ್ಪ ತಮ್ಮ ಜಮೀನುಗಳ ಕುರಿತು ಭಾಗ ಮಾಡಿಕೊಂಡಿರುತ್ತಾರೆ. ಅವರು ಭಾಗ ಮಾಡಿಕೊಂಡು ಸುಮಾರು 8 ವರ್ಷ ಆಗಿರಬಹುದು. ದಿ 10.07.1993 ರಂದು ನಿಂಗಪ್ಪ ಹಾಗೂ ನಾಗಪ್ಪ ರವರು ಜಮೀನುಗಳನ್ನು ತಮ್ಮ ಹೆಸರಿಗೆ ಖತೆ ಮಾಡಿಸಿಕೊಂಡು ಸಾಗುವಳಿ ಮಾಡಿಕೊಂಡಿರುತ್ತಾರೆ ಅಂತಾ ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ನಾನು ಹೇಳಿ ಬರೆಸಿರುತ್ತೇನೆ. ಸನ್ 1993 ರಲ್ಲಿ ಹಾವಪ್ಪ ಇವರ ಹೆಂಡತಿ ಜೀವಂತ ಇದ್ದರು. ಅವಳು ಆ ಸಮಯದಲ್ಲಿ ಆರೋಗ್ಯವಾಗಿದ್ದಳು. ಹಾವಪ್ಪ ಇವರು ವಿದ್ಯಾವಂತರು ಎಂದರೆ ಸರಿ.

ಮರಿಗೋಣಿಪ್ಪನ ವಿದ್ಯಾಭ್ಯಾಸದ ಬಗ್ಗೆ ನನಗೆ ಮಾಹಿತಿ ಇಲ್ಲ. ಮರಿಗೋಣಿಪ್ಪ ಇವನಿಗೆ ದುಶ್ಚಟಗಳಿದ್ದವು ಎಂದರೆ ಸರಿ. ಅದರ ದುರುಪಯೋಗ ಪಡಿಸಿಕೊಂಡು ಹಾವಪ್ಪ ಇವರು ದಾವಾ 1ನೇ ಆಸ್ತಿಯ ಕುರಿತು ಗೋಣಿ ಬಸಪ್ಪ ಇವನಿಂದ ಮೋಸದಿಂದ ಖರೀದಿ ಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತಾನೆ ಅಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳ ಪಕ್ಕ ನನ್ನ ಜಮೀನುಗಳು ಇದ್ದವು. ಈಗ ಯಾರು ಯಾರು ಯಾವ ಯಾವ ಸರ್ವೆ ನಂ ಅಲ್ಲಿ ಎಷ್ಟೆಷ್ಟು ಜಮೀನುಗಳನ್ನು ಸಾಗು ಮಾಡುತ್ತಾರೆ ಅಂತಾ ನಿಮಗೆ ಹೇಳಲು ಬರುತ್ತಾ ಅಂದರೆ ಸಾಕ್ಷಿಯು ಸರ್ವೆ ನಂ ಹೇಳಲು ಬರುವುದಿಲ್ಲ ಕ್ಷೇತ್ರ ಹೇಳಬಹುದು ಅನ್ನುತ್ತಾರೆ. ದಾವಾ ಆಸ್ತಿಗಳಲ್ಲಿ ಹಾವಪ್ಪ ಮತ್ತು ಮರಿಗೋಣಿಪ್ಪ ಇವರ ನಡುವೆ ಯಾವದೇ ವಿಭಾಗ ಆಗಿಲ್ಲ ಆದ್ದರಿಂದ ವಾದಿಯರಿಗೆ ದಾವಾ ಆಸ್ತಿಗಳಲ್ಲಿ ಸಮನಾದ ಭಾಗ ಇದೆ ಎಂದರೆ ಸರಿಯಲ್ಲ. ನಾನು ಮತ್ತು ಪ್ರತಿವಾದಿಯರು ವಿಶ್ವಾಸಿತರು ಎಂದರೆ ಸರಿ. ಪ್ರತಿವಾದಿಯರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ